Minimum and Maximum Price of Rice, Wheat and Jowar

166. SRI B. G. BANAKAR (Hirekerur).—

Will the Minister for Food and Forest be pleased to state.—

(*a*) whether the Government intend to fix minimum and maximum price of Rice, Wheat and Jowar for producers and consumers ;

(*b*) whether the Government is aware that the middlemen like traders are getting very high margin of profit between purchase and sale price of foodgrains ;

(*c*) if so, the kind of action taken to reduce the margin of profit of the middlemen ?

SRI K. H.PATIL (Minister for Food and Forest).—

(*a*) Only the maximum price at which wheat may be sold by wholesale and retail dealers has been fixed No minimum and maximum prices has been fixed in respect of rice and Jowar.

(*b*) No.

(*c*) Does not arise in view of reply to clause (*b*)

ಶ್ರೀ ಬಿ. ಜಿ. ಬಣಕಾರ್.—ರಾಜ್ಯದಲ್ಲಿ ರಾಗಿಯನ್ನು ವರ್ತಕರು ಕ್ವಿಂಟಾಲಿಗೆ ೧೦೦ ರೂಪಾಯಿಗಳಂತೆ ಕೊಂಡು ಕೆಲವು ಕಡೆಗಳಲ್ಲಿ ೧೫೦ ರೂಪಾಯಿಗಳಿಗೂ, ಜೋಳವನ್ನು ೧೦೦ ರೂಪಾಯಿಗಳಿಗೆ ಕೊಂಡು ೧೮೦ ರೂಪಾಯಿಗಳಿಗೆ ಮಾರುತ್ತಿದ್ದಾರೆ. ಅದೇ ಪ್ರಕಾರ ರಾಗಿಯನ್ನು ಒಂದು ಕ್ವಿಂಟಾಲಿಗೆ ೧೦೦ ರೂಪಾಯಿಗಳಂತೆ ಕೊಂಡು ೧೨೦ ರೂಪಾಯಿಗಳಿಗೆ ಮಾರುತ್ತಿದ್ದಾರೆ. ಅಕ್ಕಿಯನ್ನು ಬೆಂಗಳೂರಿನಲ್ಲಿಯೇ ಒಂದು ಕೆ.ಜಿ.ಗೆ ೨ ೧/೨ ಅಥವಾ ೩ ರೂಪಾಯಿನಂತೆ ಮಾರುತ್ತಿದ್ದಾರೆ. ಅವರು ಬತ್ತವನ್ನು ಕ್ವಿಂಟಾಲಿಗೆ ೧೨೦ ಅಥವಾ ೧೫೦ ರೂಪಾಯಿಗಳಂತೆ ಕೊಳ್ಳುತ್ತಾರೆ. ಅಂದರೆ ಒಂದು ಕ್ವಿಂಟಾಲಿಗೆ ಮೂರರಷ್ಟು ಮಾರ್ಜಿನ್ ಲಾಭ ಇಟ್ಟುಕೊಂಡು ಮಾರುತ್ತಿದ್ದಾರೆ. ಆದ್ದರಿಂದ ರೈತನ ಉತ್ಪಾದನೆಯ ಖರ್ಚು ಹಾಗೂ ಗ್ರಾಹಕರು ಯಾವ ಬೆಲೆಯನ್ನು ಕೊಡಬಹುದೆಂಬುದನ್ನು ನೋಡಿಕೊಂಡು ಅಕ್ಕಿ ಹಾಗೂ ಜೋಳಕ್ಕೆ ಸಂಬಂಧಿಸಿದಂತೆ ಏಕೆ ಗರಿಷ್ಠ ಬೆಲೆಯನ್ನು ಸರ್ಕಾರದವರು ನಿರ್ಧಾರ ಮಾಡಬಾರದು ?

† ಶ್ರೀ ಕೆ. ಎಚ್. ಪಾಟೀಲ್.—ವ್ಯವಹಾರದಲ್ಲಿ ಅತಿಶಯವಾಗಿ ಆಹಾರ ಪದಾರ್ಥಗಳನ್ನು ತಯಾರು ಮಾಡುವಾಗ ಖರ್ಚು ಆಗುವುದನ್ನು ಕಡಿಮೆ ಮಾಡಬೇಕೆಂಬ ದೃಷ್ಟಿಯಿಂದ ಅಕ್ಕಿ ಮತ್ತು ಜೋಳಕ್ಕೆ ಕನಿಷ್ಠ ಮತ್ತು ಗರಿಷ್ಠ ಬೆಲೆಗಳನ್ನು ನಿಗದಿ ಮಾಡಿಲ್ಲ. ಅವಶ್ಯಕವಿದ್ದರೆ, ಮಾರ್ಕೆಟ್ ರೇಟ್ ಜಾಸ್ತಿಯಾದರೆ ಆಗ ಕೇಂದ್ರ ಸರ್ಕಾರಕ್ಕೆ ಇವುಗಳ ಬೆಲೆಗಳನ್ನೂ ಸಹ ನಿಗದಿ ಮಾಡಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡುತ್ತೇನೆ. ಮಾನ್ಯ ಸದಸ್ಯರು ಹೇಳಿದ ಸಲಹೆ ಬಹಳ ಉತ್ತಮವಾದುದು.

ಶ್ರೀ ಬಿ. ಜಿ. ಬಣಕಾರ್.—ಗೋಧಿಗೆ ಕನಿಷ್ಠ ಹಾಗೂ ಗರಿಷ್ಠ ಬೆಲೆ ನಿಗದಿ ಮಾಡಿರುವಂತೆ ಜೋಳ ಮತ್ತು ಅಕ್ಕಿಗೂ ಏಕೆ ಒಂದು ಬೆಲೆಯನ್ನು ನಿರ್ಧಾರ ಮಾಡಬಾರದು ?

ಶ್ರೀ ಕೆ. ಎಚ್. ಪಾಟೀಲ್ —ಗೋಧಿಯನ್ನು ಕಂಟ್ರೋಲ್ ಮಾಡುವ ಉದ್ದೇಶದಿಂದ ಕೇಂದ್ರ ಸರ್ಕಾರದವರು ಗೋಧಿಗೆ ಒಂದು ಬೆಲೆಯನ್ನು ನಿರ್ಧಾರ ಮಾಡಿದ್ದಾರೆ. ಅದೇ ರೀತಿ ಅವಶ್ಯಕ ಕಂಡು ಬಂದರೆ, ಇವುಗಳ ಬಗ್ಗೆಯೂ ಅದೇ ರೀತಿಯಾಗಿ ಒಂದು ಬೆಲೆಯನ್ನು ಇಂಪೋಜ್ ಮಾಡಲಿಕ್ಕೆ ಪ್ರಯತ್ನ ಮಾಡೋಣ.

ಶ್ರೀ ಸಿ. ಬೈರೇಗೌಡ.—ವರ್ತಕರು ಈ ಆಹಾರ ಪದಾರ್ಥಗಳನ್ನು ಕೊಳ್ಳುವ ಬೆಲೆಗೂ ಮತ್ತು ಮಾರುವ ಬೆಲೆಗೂ ಬಹಳ ಅಂತರವಿರುತ್ತದೆ. ಆದ್ದರಿಂದ ಸರ್ಕಾರದವರೇ ಇವುಗಳ ಸಗಟು ವ್ಯಾಪಾರವನ್ನು ತೆಗೆದುಕೊಳ್ಳುವ ಯೋಜನೆಯನ್ನು ಮಾಡುತ್ತಾರೆಯೇ ?

ಶ್ರೀ ಕೆ. ಎಚ್. ಪಾಟೀಲ್.—ಬಹು ಸಂಖ್ಯಾತರ ಅಭಿಪ್ರಾಯ ಈ ಒಂದು ತತ್ವಕ್ಕೆ ವಿರೋಧವಾಗಿರುವುದರಿಂದಲೇ, ಸರ್ಕಾರ ಇನ್ನೂ ಅದಕ್ಕೆ ಕೈಹಾಕಿಲ್ಲ.

ಶ್ರೀ ಟಿ ಎಂ. ಮಂಜುನಾಥ್.—ಯಾವ ಜನರು ಆ ರೀತಿ ಇಲ್ಲಿ ವಿರೋಧ ಮಾಡಿದ್ದಾರೆ ? ಇದನ್ನು ಏಕೆ ಕೈ ಬಿಟ್ಟಿದ್ದೀರಿ ?

ಶ್ರೀ ಕೆ ಎಚ್. ಪಾಟೀಲ್ —ಈ ಸದನದಲ್ಲಿ ಮಾತನಾಡುವಾಗ ನಿಯಂತ್ರಣವನ್ನು ಕಡಿಮೆ ಮಾಡ ಬೇಕೆಂದು ಬಹುಜನ ಸದಸ್ಯರು ಮಾತನಾಡಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಇಲ್ಲಿ ಆ ರೀತಿ ಮಾತನಾಡಲಿಲ್ಲ.

ಅಧ್ಯಕ್ಷರು.—ಈಗ ಮಾನ್ಯ ಸದಸ್ಯರು ಪ್ರಶ್ನೆ ಕೇಳಬೇಕು.

ಶ್ರೀ ಕೊಣಂದೂರು ಲಿಂಗಪ್ಪ.—ಮಾನ್ಯ ಸಚಿವರು ಈ ಸಭೆಯನ್ನೂ ಮತ್ತು ಜನತೆಯನ್ನೂ ತಪ್ಪು ದಾರಿಗೆ ಎಳೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಸಗಟು ವ್ಯಾಪಾರವನ್ನು ಕ್ರಮಬದ್ಧವಾಗಿ ನಡೆಸ ಬೇಕೆಂದು ಹೇಳುವವರು ನಾವು. ಆದರೂ ಕೇಂದ್ರ ಸರ್ಕಾರದವರು ಆದನ್ನು ಕೈ ಬಿಟ್ಟಿದ್ದಾರೆ. ಆದ್ದ ರಿಂದ ಇವತ್ತು ಸಗಟು ವ್ಯಾಪಾರವನ್ನು ಸರ್ಕಾರದವರೇ ತೆಗೆದುಕೊಂಡು ಕ್ರಮಬದ್ಧವಾಗಿ ಮಾಡಬೇಕೆಂದು ನನ್ನ ಸಲಹೆ.

Rise in prices of foodgrains

232. SRI K. PRABHAKAR (Varthur).—

Will the Minister for Food and Forest be pleased to state.—

(*a*) the main reason for the rapid spurt in prices of foodgrains in the State ;

(*b*) the efforts made by the Government to check such rise in prices ;

(*c*) the periodical rise in prices of first quality rice and first quality of ragi once in five years from 1950 to 1955, 1955 to 1960, 1960 to 1965, 1965 to 1970, 1970 to 1974 etc.,

SRI K. H PATIL (Minister for Food and Forests).—

(*a*) The following are among the causes for the rapid rise in prices of foodgrains in the State and the rest of the country in recent months.—

1. The General inflation in the economy of the country.

2. Increase in the cost of transport consequent on the steep hike in the prices of petrol/diesel.

3. Increased procurement prices and consequent increase in the issue price of rise, wheat, etc., supplied through Government Fair Price Shops.

4. Production not keeping pace with the increase in population.

(*b*) A larger percentage of the marketable surplus has been procured under the levy system to issue more grains to existing Informal Rationing Areas and to the new areas to be covered in stages. Through the mechanism of interdistrict movement control the supply of rice in the free market is regulated. Dehoarding measures are taken periodically to bring out hoarded stocks and make them available for distribution.

(*c*) Statement appended.